## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## SC No. 41/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಶ್ರೀನಿವಾಸ್ ಎಂ.ಕೆ** | **PW - 11** |
| ತಂದೆಯ ಹೆಸರು | : | **ಕಾರ್ಯಪ್ಪ ಎಂ.ಎಂ** | **CW - 11** |
| ವಯಸ್ಸು | : | **60 ವರ್ಷ** | |
| ವೃತ್ತಿ | : | **ವ್ಯವಸಾಯ** | |
| ವಾಸ | : | **ಕುಂದಚೇರಿ ಗ್ರಾಮ, ಮಡಿಕೇರಿ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 17-04-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ನನಗೆ ಪ್ರಾಸಾ-1, ಪ್ರಾಸಾ-2, ಚಾಸಾ-12 ಮತ್ತು ಆರೋಪಿ ಇವರ ಪರಿಚಯ ಇರುತ್ತದೆ. ನಂದೀಶ್ ಮೃತ ಪಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿ ಪಂಚನಾಮೆ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆ ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು **ನಿಪಿ-11(ಸಿ)** ಎಂದು ಗುರುತಿಸಲಾಯಿತು. ನಾನು ತೋಟದಲ್ಲಿ ಕೆಲಸ ಮಾಡುತ್ತಿದ್ದಾಗ ಪೊಲೀಸರು ಬಂದು ಸಹಿ ಮಾಡು ಎಂದಿದಕ್ಕೆ ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ಯಾವ ವಸ್ತುಗಳನ್ನು ನನ್ನ ಮುಂದೆ ವಶಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ಪೊಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಗಿದೆ. ಉಳಿದ ಎರಡು ಪೊಟೋಗಳನ್ನು **ನಿಪಿ-21** ಮತ್ತು **ನಿಪಿ-22** ಎಂದು ಗುರುತಿಸಲಾಯಿತು. ಪೊಟೋಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ**

1. ದಿನಾಂಕ 28.11.2023 ರಂದು ಆರೋಪಿತನು ತನ್ನ ಹೇಳಿಕೆಯಲ್ಲಿ ನಂದೀಶನನ್ನು ಕೊಲೆ ಮಾಡಲು ಉಪಯೋಗಿಸಿದ್ದ ಕತ್ತಿ ಹಾಗೂ ಆತನು ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸಿದಾಗಿ ತಿಳಿಸಿದ್ದು, ಆ ಪ್ರಕಾರ ಆರೋಪಿ ವಾಸದ ಮನೆಯಲ್ಲಿ ಆರೋಪಿತನು ಹಾಜರುಪಡಿಸಿದ ಕತ್ತಿ ಮತ್ತು ಆತನ ಬಟ್ಟೆಗಳನ್ನು ಹಾಗೂ ಆತನ ತಾಯಿ ಹಾಜರುಪಡಿಸಿದ ಬಂದೂಕಿನ ವಿನಾಯಿತಿ ಪತ್ರವನ್ನು ಪೊಲೀಸರು ನಿಪಿ-11 ರಂತೆ ಪಂಚನಾಮೆ ಮಾಡಿ ವಶಪಡಿಸಿಕೊಂಡು ನಿಪಿ-12, ನಿಪಿ-13 ಮತ್ತು ನಿಪಿ-21 ಮತ್ತು ನಿಪಿ-22 ರಂತೆ ಪೊಟೋ ತೆಗೆಸಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ಅದರಂತೆ ನಾನು ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಪೊಲೀಸರ ಮುಂದೆ ಈಗೆ ಓದಿ ಹೇಳಿದಂತೆ "ನಾನು ಈ ಮೇಲಿನ ವಿಳಾಸದಲ್ಲಿ .................... ಉತ್ತಪ್ಪರವರನ್ನು ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-23** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.